# ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN-U40109KA2004SGC035177
ಕಾರ್ಪೋರೇಟ್ ಕಛೇರಿ,
ನಂ: 29, ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
ವಿಜಯನಗರ 2ನೇ ಹಂತ,
ಮೈಸೂರು-560017
ಇಮೇಲ್: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ
ಕಾರ್ಯ ಮತ್ತು ಪಾಲನೆ ಉಪವಿಭಾಗ,
ಸೆಸ್ಕ್, ಸಾಲಿಗ್ರಾಮ-571604
ದೂರವಾಣಿ ಸಂಖ್ಯೆ :08223283700
ಇಮೇಲ್: aeecescsaligrama@gmail.com

ಕ್ರಸಂ: ಸೆಸ್ಕ್/ಸಾಲಿಗ್ರಾಮ/ಸಕಾನಿಇಂ(ವಿ)/ಸಇಂ(ತಾ)/**18-19:** 1021

ದಿನಾಂಕ: **23 - 01 - 2019**

**ದಿನಾಂಕ; 23.01.2019 ರಂದು ಶ್ರೀ. ಸನ್ಮಾನ್ಯ ಮುಜಾಮಿಲ್‌ಖಾನ್, ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಮೈಸೂರುರವರ ಅಧ್ಯಕ್ಷತೆಯಲ್ಲಿ ಕೆ.ಇ.ಆರ್.ಸಿ ನಿರ್ದೇಶನದ ಮೇರೆಗೆ ಉಪ ವಿಭಾಗ ಮಟ್ಟದ ಜನ ಸಂಪರ್ಕ ಸಭೆಯನ್ನು ಸಾಲಿಗ್ರಾಮ ಉಪ ವಿಭಾಗ ಕಛೇರಿಯಲ್ಲಿ ನಡೆಸಲಾದ ಸಭೆಯ ನಡಾವಳಿಗಳು.**

**ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿ ಸಭೆಯನ್ನು ಬೆಳಿಗ್ಗೆ: 11:00ಕ್ಕೆ ಪ್ರಾರಂಭಿಸಿದರು.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :**

1. ಶ್ರೀ.ಬಿ.ಎಸ್.ಚಂದ್ರಶೇಖರ್, ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ, ಕೆ ಆರ್ ನಗರ
2. ಶ್ರೀ ನಂಜುಂಡಸ್ವಾಮಿ, ಲೆಕ್ಕಾಧಿಕಾರಿಗಳು, ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ, ಕೆ ಆರ್ ನಗರ
3. ಶ್ರೀ. ಮದುಸೂದನ್ ಕೆ.ಎಮ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ಉಪವಿಭಾಗ, ಸಾಲಿಗ್ರಾಮ.
4. ಶ್ರೀ ಎಂ.ಪಿ. ಧರ್ಮ, ಸಹಾಯಕ ಇಂಜಿನಿಯರ್ ತಾಂತ್ರಿಕ ಶಾಖೆ, ಕಾ ಮತ್ತು ಪಾ ಉಪವಿಭಾಗ, ಸಾಲಿಗ್ರಾಮ,
5. ಶ್ರೀ ಗೋವಿಂದಶೆಟ್ಟಿ, ಹಿರಿಯ ಸಹಾಯಕರು, ಕಂದಾಯ ಶಾಖೆ, ಕಾ ಮತ್ತು ಪಾ ಉಪವಿಭಾಗ, ಸಾಲಿಗ್ರಾಮ,
6. ಶ್ರೀ ಸುನಿಲ್ ಯಾದವ್, ಸಹಾಯಕ ಇಂಜಿನಿಯರ್(ವಿ), ಕಾ ಮತ್ತು ಪಾ ಶಾಖೆ ಸಾಲಿಗ್ರಾಮ,
7. ಶ್ರೀ ಎಸ್. ಸುರೇಶ, ಕಿರಿಯ ಇಂಜಿನಿಯರ್ (ವಿ) ಕಾ ಮತ್ತು ಪಾ ಶಾಖೆ ಭೇರ್ಯ,
8. ಕು.ಯಶಸ್ವಿನಿ ಆರ್ ಶೇಖರ್ ಕಿರಿಯ ಇಂಜಿನಿಯರ್ (ವಿ) ಕಾ ಮತ್ತು ಪಾ ಶಾಖೆ ಮಿರ್ಲೆ,

ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಾರ್ವಜನಿಕರು ಹಾಗೂ ಪತ್ರಕರ್ತರ ಜೊತೆಯಲ್ಲಿ ಈ ಕೆಳಗಿನ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸಲು ಚರ್ಚಿಸಲಾಯಿತು.

ಮುಂದುವರೆದಿದೆ

ಸಭೆಯಲ್ಲಿ ಈ ಕೆಳಕಂಡ ಕುಂದು ಕೊರತೆಯನ್ನು ಗ್ರಾಹಕರಿಂದ/ಸಾರ್ವಜನಿಕರುಗಳಿಂದ ದೂರುಗಳನ್ನು/ಮನವಿಗಳನ್ನು ಸ್ವೀಕರಿಸಲಾಯಿತು.

| ಕ್ರ. ಸ | ಅರ್ಜಿದಾರ ವಿಳಾಸ | ಮೊಬೈಲ್ ಸಂಖ್ಯೆ | ಗ್ರಾಮ | ಮನವಿಯ ವಿವರ | ಸಮುಜಾಯಿಷಿ ಉತ್ತರ |
|---|---|---|---|---|---|
| 1 | ಜವರೇಗೌಡ | 8008383964 | ಗುಳುವಿನತ್ತಿಗುಪ್ಪೆ | ಗುಳುವಿನತ್ತಿಗುಪ್ಪೆ ಗ್ರಾಮದಲ್ಲಿ ನಿರಾವರಿ ಪಂಪ್ ಸೆಟ್ ಕೊರೆಸಿದ್ದು ಹತ್ತಿರ ದೊಡ್ಡಕಾಡನೂರು ಶಾಖೆಯ ಕಡೆಯಿಂದ ಲೈನ್ ವಿಸ್ತರಿಸಿಕೊಳ್ಳಲು ನಾವು ಎಲ್ಲಿ ಅರ್ಜಿ ನೊಂದಾಯಿಸಬೇಕೆಂದು ಕೋರಿರುತ್ತಾರೆ. | ಸದರಿಯವರಿಗೆ ಸಾಲಿಗ್ರಾಮ ಉಪ ವಿಭಾಗದಲ್ಲಿ ಅರ್ಜಿ ನೊಂದಾಯಿಸಲು ಕೋರಲಾಯಿತು. |
| 2 | ಕಂಟಿ ಕುಮಾರ | 9663788498 | ಸಾಲಿಗ್ರಾಮ | ಒಂದೆ ಮನೆಯಲ್ಲಿ 2 ಮತ್ತು 3 ಕುಟುಂಬಗಳು ವಾಸವಿದ್ದು ಪ್ರತ್ಯೇಕವಾಗಿ ಮೀಟರ್ ಹಾಕಿಸಿಕೊಳ್ಳಲು ಸರ್ಕಾರದಿಂದ ಯಾವ ಯೋಜನೆಗಳು ಇರುತ್ತವೆಯೆಂದು ಕೋರಿರುತ್ತಾರೆ. | ಸದರಿಯವರಿಗೆ ಈಗ ಯಾವ ಸರ್ಕಾರದಿಂದ ಯಾವ ಯೋಜನೆಗಳು ಇರುವುದಿಲ್ಲ. ಅರ್ಜಿಯನ್ನು ನೋಂದಾಯಿಸಿ ನಿಗಮದ ನಿಯಮಗಳ ಅನುಸಾರ ತೆಗೆದುಕೊಳ್ಳಲು ಸೂಚಿಸಲಾಯಿತು. |
| 3 | ಅರವಿಂದ | 9972601985 | ಸಾಲಿಗ್ರಾಮ | ನಮ್ಮ ಐ.ಪಿ. ಸೆಟ್ ಗಳಿಗಿರುವ ಪರಿವರ್ತಕವು ಓವರ್ ಲೋಡ್ ಆಗಿದ್ದು, ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿರುತ್ತಾರೆ. | ಆದಷ್ಟು ಶೀಘ್ರವಾಗಿ ಸಮಸ್ಯೆಯನ್ನು ಬಗೆಹರಿಸುವಂತೆ ಸಂಬಂದಿಸಿದ ಸಾಲಿಗ್ರಾಮ ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು. |
| 4 | ಬಲರಾಮೇಗೌಡ | 9141730894 | ಎಲಾದಹಳ್ಳಿ | ಎಲಾದಹಳ್ಳಿಯಲ್ಲಿ ಪರಿವರ್ತಕ ಕೆಟ್ಟು ಹೋಗಿ 01 ತಿಂಗಳಾಗಿದ್ದರೂ ಇದುವರೆವಿಗೂ ಬದಲಾಯಿಸಿರುವುದಿಲ್ಲವೆಂದು ಕೋರಿರುತ್ತಾರೆ. | ಆದಷ್ಟು ಶೀಘ್ರವಾಗಿ ಸಮಸ್ಯೆಯನ್ನು ಪರಿಹರಿಸಿಕೊಡಲಾಗುವುದೆಂದು ತಿಳಿಸಲಾಯಿತು. |

ಸಭೆಯಲ್ಲಿದ್ದ ಸಾರ್ವಜನಿಕರು ಮತ್ತು ಪತ್ರಕರ್ತರಿಗೆ ವಂದಿಸಿ ಮೇಲೆ ತಿಳಿಸಿರುವ ಎಲ್ಲಾ ಕುಂದು ಕೊರತೆಗಳನ್ನು ಮುಂದಿನ ಜನ ಸಂಪರ್ಕ ಸಭೆಯ ಒಳಗಾಗಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿ ಮತ್ತು ಆದ್ಯತೆ ಮೇರೆಗೆ ಕ್ರಮವಹಿಸುವಂತೆಯೂ ಸಂಬಂದ ಪಟ್ಟ ಅಧಿಕಾರಿಗಳಿಗೆ ಪ್ರತಿ ದಿನ ಈ ಸಂಬಂಧ ಪರಾಮರ್ಶಿಸುವಂತೆ ಸೂಚಿಸಿ ಸಭೆಯನ್ನು ಮದ್ಯಾಹ್ನ 01:00 ಕ್ಕೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ ವಿಭಾಗ,
ಸೆಸ್ಕ್, ಸಾಲಿಗ್ರಾಮ.

ಪ್ರತಿಗಳನ್ನು:-

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು ವಲಯ, ಚಾವಿಸನಿನಿ. ಮೈಸೂರುರವರ ಆದ್ಯ ಗಮನಕ್ಕಾಗಿ ಸಲ್ಲಿಸಲಾಗಿದೆ.
2. ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ, ವೃತ್ತ, ಸೆಸ್ಕ್, ಮೈಸೂರುರವರ ಆದ್ಯ ಗಮನಕ್ಕಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ, ಸೆಸ್ಕ್, ಹುಣಸೂರುರವರ ಆದ್ಯ ಗಮನಕ್ಕಾಗಿ ಸಲ್ಲಿಸಲಾಗಿದೆ.

ಪ್ರತಿಗಳನ್ನು:-

4. ಸಹಾಯಕ ಇಂಜಿನಿಯರ್(ತಾಂತ್ರಿಕ), ಉಪ ವಿಭಾಗ, ಸಾಲಿಗ್ರಾಮ ರವರ ಮಾಹಿತಿಗಾಗಿ.
5. ಹಿರಿಯ ಸಹಾಯಕರು, ಸೆಸ್ಕ್, ಉಪ ವಿಭಾಗ, ಸಾಲಿಗ್ರಾಮ ರವರ ಮಾಹಿತಿಗಾಗಿ.
6. ಶಾಖಾಧಿಕಾರಿಗಳು, ಸಾಲಿಗ್ರಾಮ, ಮಿರ್ಲೆ, ಭೇರ್ಯ ರವರ ಮಾಹಿತಿಗಾಗಿ.
7. ಕಛೇರಿ ಕಡತಕ್ಕೆ.